227

# ಕರ್ನಾಟಕ ಸರ್ಕಾರ

ಸಂಖ್ಯೆ: ಇಎನ್ 70 ವಿಎಸ್‌ಸಿ 2015

ಕರ್ನಾಟಕ ಸರ್ಕಾರದ ಸಚಿವಾಲಯ
2ನೇ ಮಹಡಿ, ವಿಕಾಸ ಸೌಧ,
ಬೆಂಗಳೂರು, ದಿನಾಂಕ: 10-05-2016

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಇಂಧನ ಇಲಾಖೆ, ವಿಕಾಸ ಸೌಧ,
ಬೆಂಗಳೂರು.

ಇವರಿಗೆ,
ವ್ಯವಸ್ಥಾಪಕ ನಿರ್ದೇಶಕರು,
ಬೆಸ್ಕಾಂ/ಸೆಸ್ಕ್/ಮೆಸ್ಕಾಂ/ಹೆಸ್ಕಾಂ/ಜೆಸ್ಕಾಂ.

ಮಾನ್ಯರೆ,

ವಿಷಯ: ಸೌರ ವಿದ್ಯುತ್ ರವಾನೆಗೆ ಸಂಬಂಧಿಸಿದಂತೆ ವಿದ್ಯುತ್ ಜಾಲ ಸಂಪರ್ಕ ಏರ್ಪಡಿಸುವ ಬಗ್ಗೆ (Solar Grid Connectivity)

*****

KERC ರವರು ದಿನಾಂಕ 02-05-2016 ರಂದು ಹೊರಡಿಸಿರುವ ನಿರ್ದೇಶನಾ ಆದೇಶದಲ್ಲಿ ವಿದ್ಯುತ್ ಜಾಲ ಸಂಪರ್ಕಕ್ಕೆ ಪ್ರಸರಣ/ವಿತರಣಾ Licensee ಯವರು ಅಗತ್ಯವಾದ ರವಾನೆ ಮಾರ್ಗ ಸೌಲಭ್ಯಗಳನ್ನು ಒದಗಿಸಬೇಕೆಂದು ತಿಳಿಸಿರುತ್ತಾರೆ. ಮುಂದುವರೆದಂತೆ, ಪ್ರಸರಣ/ವಿತರಣಾ Licensee ಯವರು ಸದರಿ ಸೌಲಭ್ಯಕ್ಕೆ ಯಾವುದೇ ವ್ಯವಸ್ಥೆಯ ಉನ್ನತೀಕರಣ ಶುಲ್ಕಗಳನ್ನು ಪಡೆಯುವಂತಿಲ್ಲವೆಂದು ತಿಳಿಸಿರುತ್ತಾರೆ. ಸೌರ ವಿದ್ಯುತ್ ಸ್ಥಾವರದಿಂದ ಸಂಪರ್ಕ ಏರ್ಪಡುವ ಸ್ಥಳದವರೆಗೆ (Inter Connection Point) ಮಾರ್ಗವನ್ನು, PPA ದಾಖಲೆಯಲ್ಲಿ ವಿವರಿಸಿರುವಂತೆ ಸ್ಥಾವರದ ಮಾಲೀಕರೇ ಒದಗಿಸಬೇಕಾಗಿರುತ್ತದೆ.

ಸೌರ ಮೇಲ್ಛಾವಣಿ ವಿದ್ಯುತ್ ರವಾನೆಯು ಉತ್ಪಾದನಾ ಸ್ಥಾವರಕ್ಕೆ ಹತ್ತಿರವಿರುವ ವಿತರಣಾ ವ್ಯವಸ್ಥೆಯ ವಿದ್ಯುತ್ ಮಾರ್ಗಗಳಿಗೆ ಸಂಪರ್ಕ ಏರ್ಪಡಿಸಿಕೊಂಡು ಸ್ಥಾಪನೆಯಾಗಬೇಕಾಗಿದೆ.

ಸಾಮಾನ್ಯವಾಗಿ ಸೌರ ವಿದ್ಯುತ್ ಮೇಲ್ಛಾವಣಿ ಯೋಜನೆಗಳ ಸ್ಥಾವರಗಳು ವಿತರಣಾ ವ್ಯವಸ್ಥೆಯ ವ್ಯಾಪ್ತಿಯಲ್ಲಿದ್ದು, ಹತ್ತಿರದ ವಿತರಣಾ ಮಾರ್ಗಗಳು 11 ಕೆ.ವಿ ಅಥವಾ ಎಲ್.ಟಿ ಮಾರ್ಗಗಳಾಗಿರುತ್ತವೆ. ಆದ್ದರಿಂದ, ವಿತರಣಾ ಮಾರ್ಗಗಳ ಸಾಮರ್ಥ್ಯಕ್ಕನುಗುಣವಾಗಿ ಮಂಜೂರಾದ ವಿದ್ಯುತ್ ಪ್ರಮಾಣ ಅಥವಾ ಮಂಜೂರಾದ ವಿದ್ಯುತ್ ಪ್ರಮಾಣದ ಶೇಕಡಾ 150 ಕ್ಕಿಂತಲೂ ಕಡಿಮೆಯಿರುವಂತೆ ಸೌರ ವಿದ್ಯುತ್ ರವಾನೆ ಮಾಡಬೇಕಾಗಿದೆ. ಸೌರ ಮೇಲ್ಛಾವಣಿ ವಿದ್ಯುತ್ ಸ್ಥಾವರಗಳು ವಿತರಣಾ ಕಂಪನಿಗಳ ಎಲ್.ಟಿ/ ಹೆಚ್.ಟಿ ಮಾರ್ಗಗಳೊಂದಿಗೆ ಸಂಪರ್ಕಿತಗೊಳ್ಳುವುದರಿಂದ ಮಾರ್ಗಗಳ ಉನ್ನತೀಕರಣ ಅಥವಾ ಬಲವರ್ಧನೆಯ ಪ್ರಶ್ನೆಯು ಉದ್ಭವಿಸುವುದಿಲ್ಲ.

ವಿದ್ಯುತ್ ಉಪಕೇಂದ್ರಗಳು ಪ್ರಸರಣ ಕಂಪನಿಯ ವ್ಯಾಪ್ತಿಯಲ್ಲಿ ಬರುವುದರಿಂದ ಉಪಕೇಂದ್ರಗಳಿಗೆ ನೇರವಾಗಿ ರವಾನೆ ಮಾರ್ಗವನ್ನು ರಚಿಸುವ ಪ್ರಮೇಯ ಉದ್ಭವಿಸುವುದಿಲ್ಲವಾದ್ದರಿಂದ ಪ್ರಸರಣ ಕಂಪನಿಯು ಯಾವುದೇ ಉನ್ನತೀಕರಣ ಸೌಲಭ್ಯವನ್ನು ಒದಗಿಸಬೇಕಾಗಿ ಬರುವುದಿಲ್ಲ.

ಈ ಸಂಬಂಧವಾಗಿ, ವಿದ್ಯುತ್ ಸರಬರಾಜು ಕಂಪನಿಗಳು ಸೌರ ಮೇಲ್ಛಾವಣಿ ವಿದ್ಯುತ್ ಉತ್ಪಾದನೆಯ ಸ್ಥಾಪನೆಗೆ ಸಂಬಂಧಿಸಿದಂತೆ, KERC ರವರಲ್ಲಿ ಸ್ಪಷ್ಟೀಕರಣ ಕೋರಿ, ಮನವಿ ಮಾಡಬೇಕೆಂದು ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ವಿಶ್ವನಾಥ ಪಿ. ಹಿರೇಮಠ)
ಸರ್ಕಾರದ ಉಪ ಕಾರ್ಯದರ್ಶಿ
ಇಲಾಖೆ